ಎನ್. ಜಗನ್ನಾಥ ಪ್ರಕಾಶ್

# ಹಲವು ಪ್ರತಿಭೆಗಳ ಗಣಿ ಸುಭದ್ರಮ್ಮ ಮನ್ಸೂರ್



ಕನ್ನಡ ವೃತ್ತಿ ರಂಗಭೂಮಿ ಉತ್ತುಂಗದಲ್ಲಿದ್ದ ಕಾಲ ಅದು. ಆಗ ಅಭಿನಯ ಮತ್ತು ಗಾಯನ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿ, ಏಳು ದಶಕಗಳಿಗೂ ಹೆಚ್ಚು ಕಾಲ ಕಲಾ ರಸಿಕರನ್ನು ರಂಜಿಸುತ್ತಿರುವ ಹಿರಿಯ ಕಲಾವಿದೆ ಸುಭದ್ರಮ್ಮ ಮನ್ಸೂರ್.

ಬಾಲ್ಯದಿಂದಲೇ ಕಲೆಯ ಒಡನಾಟವಿಟ್ಟುಕೊಂಡ ಸುಭದ್ರಮ್ಮ ಬಳ್ಳಾರಿಯಲ್ಲಿ ಶ್ರೀಧರ ರಾವ್ ಅವರು ಆರಂಭಿಸಿದ 'ಶ್ರೀ ಸರ್ವಮಂಗಳ ನಾಟ್ಯ ಸಂಘ'ಕ್ಕೆ ಕಾಲಿಡುವ ಮೂಲಕ ಕಲಾಜಗತ್ತಿಗೆ ಬಂದವರು ಇದುವರೆಗೂ ಅದನ್ನು ಬಿಟ್ಟಿಲ್ಲ.

ಹೊಸ ನಾಟಕ ಸಂಸ್ಥೆಗಳು ಆರಂಭವಾಗುವುದು ಕಣ್ಮುಚ್ಚುವುದು ಎಂದಿನಿಂದಲೂ ಸಾಮಾನ್ಯ ಸಂಗತಿ. ಶ್ರೀಧರ ರಾಯರು ಆರಂಭಿಸಿದ 'ಶ್ರೀ ಸರ್ವಮಂಗಳ ನಾಟ್ಯ ಸಂಘ' ಹೆಚ್ಚು ಕಾಲ ನಿಲ್ಲಲಿಲ್ಲ. ಆದರೆ ಶ್ರೀಧರ ರಾಯರ ಗೆಳೆಯರೇ ಆದ ಡಾ. ಮಾರ್ಲಾ ಎಂಬುವರು ಈ ಕಂಪನಿಗೆ 'ಕಟೀಲು ದುರ್ಗಾಪರಮೇಶ್ವರಿ ನಾಟ್ಯ ಸಂಘ' ಎಂದು ಮರು ನಾಮಕರಣ ಮಾಡಿ ಮುನ್ನಡೆಸಲು ಮುಂದಾದರು.

ಶರೀರ, ಶಾರೀರ ಚೆನ್ನಾಗಿದ್ದ ಕಲಾವಿದೆ ಸುಭದ್ರಮ್ಮ ಬಣ್ಣದ ಬದುಕಿನಲ್ಲಿ ಬಹುಬೇಗ ಮುಂಚೂಣಿಗೆ ಬಂದರು. ಆದರೆ, ಅವರು ಅಭಿನಯಿಸುತ್ತಿದ್ದ ನಾಟಕ ಕಂಪನಿಗಳು ಮಾತ್ರ ಬಹಳ ದಿನ ಸ್ಥಿರವಾಗಿರುತ್ತಿರಲಿಲ್ಲ. ಕಟೀಲು ದುರ್ಗಾಪರಮೇಶ್ವರಿ ಸಂಸ್ಥೆಯೂ ಸರ್ವಮಂಗಳ ನಾಟ್ಯ ಸಂಘದ ಹಾದಿ ಹಿಡಿಯಿತು. ಕಂಪನಿ ಕುಟುಂಬ ಸಂಕಷ್ಟಕ್ಕೆ ಸಿಕ್ಕಿಬಿತ್ತು.

ಈ ಕಂಪನಿಗಳಲ್ಲಿ ಪ್ರದರ್ಶನವಾದ ಬಹುತೇಕ ಎಲ್ಲಾ ನಾಟಕಗಳಲ್ಲೂ ಪ್ರಮುಖ ಪಾತ್ರಧಾರಿಯಾಗಿದ್ದ ಸುಭದ್ರಮ್ಮನವರ ಕಲಾಕೌಶಲ್ಯ ಎಲ್ಲಡೆ ಹರಡಿತ್ತು. ಸುಭದ್ರಮ್ಮ ಹೆಸರಾಂತ ನಟ ಲಿಂಗರಾಜ್ ಮನ್ಸೂರ್ ಅವರೊಡನೆ ಲಗ್ನವಾಗಿದ್ದು ಇವರಿಬ್ಬರಿಗೂ 'ಕಲಾ ವೈಭವ ನಾಟ್ಯ ಸಂಘ'ದಿಂದ ಆಹ್ವಾನ ಬಂದಿದ್ದರಿಂದ ದಂಪತಿಯ ಬದುಕು ನಿರಾಳವಾಯಿತು.

ಪ್ರಸಿದ್ಧ ಕಲಾವಿದ ಏಣಗಿ ಬಾಳಪ್ಪನವರ ಮಾಲೀಕತ್ವದ 'ಕಲಾ ವೈಭವ ನಾಟ್ಯ ಸಂಘ' ನಾಡಿನುದ್ದಕ್ಕೂ ಮೊಕ್ಕಾಂ ಹೂಡುತ್ತಿತ್ತು. 'ಕುಂಕುಮ', 'ರಾಮಾಯಣ', 'ಬಸವೇಶ್ವರ', 'ಹೇಮರೆಡ್ಡಿ ಮಲ್ಲಮ್ಮ' ಮೊದಲಾದ ನಾಟಕಗಳು ಬಹು ಜನಪ್ರಿಯ ನಾಟಕಗಳಾಗಿದ್ದವು. ಬಾಳಪ್ಪನವರ ಸಮರ್ಥ ಮಾರ್ಗದರ್ಶನದಲ್ಲಿ ಕಂಪನಿ ಯಶಸ್ವಿಯಾಗಿ ನಡೆಯುತ್ತಿತ್ತು. ಆ ವೇಳೆಗಾಗಲೇ ಹಾಡುವ ನಾಯಕಿಯಾಗಿ ಸುಭದ್ರಮ್ಮ ಹೆಸರು ಪಡೆದಿದ್ದರು.

'ರಾಮಯಣ'ದಲ್ಲಿ ಸೀತೆ, 'ಕುಂಕುಮ' ನಾಟಕದಲ್ಲಿ ಚಿತ್ರಾ, 'ಹೇಮರೆಡ್ಡಿ' ನಾಟಕದಲ್ಲಿ ಮಲ್ಲಮ್ಮ ಪಾತ್ರಗಳು ಸುಭದ್ರಮ್ಮನವರಿಗೆ ಖ್ಯಾತಿ ತಂದುಕೊಟ್ಟಿದ್ದವು. 'ಜಗಜ್ಯೋತಿ ಬಸವಣ್ಣ' ನಾಟಕದ ಕಲಾವತಿ ಪಾತ್ರವಂತೂ ಸುಭದ್ರಮ್ಮನವರಿಗೆ ಅಪಾರವಾದ ಪ್ರಸಿದ್ಧಿ ಗಳಿಸಿಕೊಟ್ಟಿತ್ತು. ಪುಟ್ಟ ಪಾತ್ರದಿಂದ ಮೊದಲ್ಗೊಂಡು ನಾಯಕಿ ಪಾತ್ರದವರೆಗೆ ಎಲ್ಲಾ ಬಗೆಯ ಪಾತ್ರಗಳಲ್ಲೂ